ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

## ದಿನಾಂಕ: 28.07.2025 ರಂದು ನಡೆದ 50ನೇಯ ಹಣಕಾಸು ಸಮಿತಿ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 50ನೇಯ ಹಣಕಾಸು ಸಮಿತಿಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ:28.07.2025 ರಂದು ಸೋಮವಾರ ಬೆಳಗ್ಗೆ 11:00ಕ್ಕೆ ನಡೆಯಿತು.

ಈ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು:

1. ಡಾ॥ ಎಸ್ ಅಹಲ್ಯ, ಮಾನ್ಯ ಕುಲಪತಿಗಳು, ಕಸಂವಿ — ಅಧ್ಯಕ್ಷರು
2. ಪ್ರೊ. ವಿ ಗಿರೀಶ್‌ಚಂದ್ರ, ಕುಲಸಚಿವರು, ಕಸಂವಿ — ಸದಸ್ಯರು
3. ಶ್ರೀಮತಿ ಉಮಾ ಕೆ, ಜಂಟಿ ಕಾರ್ಯದರ್ಶಿಗಳು
   ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ — ಸದಸ್ಯರು
4. ಶ್ರೀ. ಕುಮಾರ ಎಸ್,
   ಉಪ ಕಾರ್ಯದರ್ಶಿ, (ತಾಂತ್ರಿಕ ಶಿಕ್ಷಣ ಹಾಗೂ ಯೋಜನೆ)
   ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು — ಸದಸ್ಯರು
5. ಪ್ರೊ. ವಿ ಗಿರೀಶ್‌ಚಂದ್ರ, ಡೀನ್, ಕಸಂವಿ — ಸದಸ್ಯರು
6. ಡಾ. ಕುಮಾರ ಎಸ್, ಹಣಕಾಸು ಅಧಿಕಾರಿಗಳು, ಕಸಂವಿ — ಸದಸ್ಯ ಕಾರ್ಯದರ್ಶಿ

ಹಾಜರಿದ್ದ ಸದಸ್ಯರುಗಳನ್ನು ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸ್ವಾಗತಿಸುತ್ತಾ, ಈ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| | |
|---|---|
| ವಿಷಯ 1 | 49ನೇ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗೆಗೆ. |
| ಟಿಪ್ಪಣಿ | ದಿನಾಂಕ:01.04.2025ರ ನಡಾವಳಿಯನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಸ್ಥಿರೀಕರಿಸಿತು. |
| ವಿಷಯ 2 | 49ನೇ ಸಭೆಯ ನಡಾವಳಿಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | 49ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ 3 | ಜನವರಿ–2025 ರಿಂದ ಮಾರ್ಚ್–2025ರವರೆಗಿನ ಮೂರು ತಿಂಗಳ ಜಮಾ–ಖರ್ಚನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | ಜನವರಿ, ಫೆಬ್ರವರಿ ಮತ್ತು ಮಾರ್ಚ್–2025 ರವರೆಗಿನ ಮೂರು ತಿಂಗಳ ಜಮಾ–ಖರ್ಚುನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ 4 | 2024–25ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಅನುಮೋದಿಸುವ ಬಗ್ಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ತನ್ನ ಹಣಕಾಸಿನ ವಹಿವಾಟನ್ನು Tally ತಂತ್ರಾಂಶದಲ್ಲಿ ನಮೂದಿಸಲಾಗುತ್ತಿದೆ. ಹಣಕಾಸಿನ ವ್ಯವಹಾರಗಳನ್ನು M/S. D.N Joshi & Co. ರವರು ನಿರ್ವಹಿಸುತ್ತಿದ್ದಾರೆ. ಸದರಿಯವರು 2024–25ನೇ |

| | |
|---|---|
| | ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು (Balance Sheet, Receipts & Payment and Income & Expenditure) ಸಿದ್ದಪಡಿಸಿ, ಸಲ್ಲಿಸಿರುವ ಲೆಕ್ಕಪತ್ರಗಳನ್ನು ಅನುಮೋದನೆಗಾಗಿ ಮಂಡಿಸಿದೆ |
| ನಿರ್ಣಯ | ಅನುಮೋದಿಸಿತು. |
| ವಿಷಯ 5 | **2025–26ನೇ ಸಾಲಿನ ಪರೀಕ್ಷಾ ವಿಭಾಗದ ಅಂದಾಜು ಖರ್ಚು–ವೆಚ್ಚಗಳ ಕುರಿತು.** |
| ಟಿಪ್ಪಣಿ | ಕುಲಸಚಿವರು(ಮೌಲ್ಯಮಾಪನ) ಇವರು 2025–26ನೇ ಸಾಲಿಗೆ ಪರೀಕ್ಷೆಗಳಿಂದ ಸ್ವೀಕರಿಸುವ ಶುಲ್ಕ ಅಂದಾಜು 50.00ಲಕ್ಷ ಸಂದಾಯವಾಗಲಿದ್ದು, ಅಂದಾಜು ಖರ್ಚು ರೂ.44.00 ಲಕ್ಷಗಳು ತಗಲಬಹುದೆಂದು ಮನವಿ ಸಲ್ಲಿಸಿರುತ್ತಾರೆ. ಈ ವಿಷಯವನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ನಿಯಮಾನುಸಾರ ಖರ್ಚು–ವೆಚ್ಚಗಳನ್ನು ನಿರ್ವಹಣೆ ಮಾಡಲು ಅನುಮೋದಿಸಿತು. |
| ವಿಷಯ 6 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಯೋಜನೆಗಾಗಿ ಡಿ.ಐ.ಟಿ ಖಾತೆ ಸಂಖ್ಯೆ: 64161666389 ಮತ್ತು ಎನ್‌ಎಸ್‌ಎಸ್(Subsidiary Account) ಖಾತೆ ಸಂಖ್ಯೆ: 41715301343 ತೆರೆದಿರುವುದನ್ನು ಸ್ಥಿರೀಕರಿಸುವ ಬಗೆಗೆ.** |
| ಟಿಪ್ಪಣಿ | ದಿನಾಂಕ:16.12.2014ರಂದು ಯೋಜನೆಗಳಿಗಾಗಿ ಡಿ.ಐ.ಟಿ ಖಾತೆಯನ್ನು ತೆರೆಯಲಾಗಿದ್ದು,(ಖಾತೆ ಸಂಖ್ಯೆ: 64161666389) ಮತ್ತು ಎನ್.ಎಸ್.ಎಸ್‌ಗಾಗಿ ದಿನಾಂಕ:02.03.2023ರಲ್ಲಿ Subsidiary Accountನ್ನು ತೆರೆದಿರುವ ಬಗ್ಗೆ (ಖಾತೆ ಸಂಖ್ಯೆ: 41715301343) ಈ ವಿಷಯವನ್ನು ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಸ್ಥಿರೀಕರಿಸಿತು. |
| ವಿಷಯ 7 | **ಸರ್ಕಾರದಿಂದ ಬಿಡುಗಡೆಯಾದ ಪಿಂಚಣಿ ಅನುದಾನ (ಹಳೇ ಪಿಂಚಣಿ) ರೂ.88 ಲಕ್ಷಗಳು ಹಾಗೂ ಬಡ್ಡಿ ಮೊತ್ತ ರೂ.14,91,808/– ಸೇರಿ ಒಟ್ಟು ರೂ.1,02,91,808/– ರೂಗಳು ಮತ್ತು ಬಿಟ್ಟು ಹೋಗಿರುವ 2017–18ನೇ ಸಾಲಿನ ರೂ.17 ಲಕ್ಷಗಳನ್ನು ಸರ್ಕಾರಕ್ಕೆ ಮರು ಪಾವತಿಸಿರುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಳೇ ಪಿಂಚಣಿಯ ಸಿಬ್ಬಂದಿಗಳಿಗಾಗಿ (OPS) ಸರ್ಕಾರದಿಂದ ಲೆಕ್ಕ ಶೀರ್ಷಿಕೆ 2202–05–103–0–23–118–ಯಲ್ಲಿ ಸಹಾಯಾನುದಾನ ವಿಶ್ರಾಂತಿ ವೇತನ ಅಡಿಯಲ್ಲಿ 2018–19ನೇ ಸಾಲಿಗೆ 19ಲಕ್ಷ ರೂಗಳು, 2019–20ನೇ ಸಾಲಿಗೆ 19ಲಕ್ಷ ರೂಗಳು, ಮತ್ತು 2022–23ನೇ ಸಾಲಿಗೆ 50ಲಕ್ಷ ರೂಗಳು ಸೇರಿ ಒಟ್ಟು ರೂ.88 ಲಕ್ಷ ಬಿಡುಗಡೆಯಾಗಿದೆ. ಈ ಮೊತ್ತಕ್ಕೆ ಬ್ಯಾಂಕಿನಿಂದ ರೂ.14,91,808/– ಬಡ್ಡಿ ಜಮೆಯಾಗಿರುತ್ತದೆ. ಇದರಿಂದ ಒಟ್ಟಾರೆ ರೂ.1,02,91,808/– ರೂಗಳಾಗುತ್ತದೆ. ಈ ಹಣವನ್ನು ದಿನಾಂಕ:19.06.2025ರಂದು ಸರ್ಕಾರದ ಲೆಕ್ಕ ಶೀರ್ಷಿಕೆ:2202–05–911–0–02–364–NAಗೆ ಮಾಡಲಾಗಿದೆ ಮತ್ತು 2017–18ನೇ ಸಾಲಿನಲ್ಲಿ ಬಿಟ್ಟು ಹೋಗಿರುವ 17ಲಕ್ಷ ರೂಗಳನ್ನು ಸಹ ಮೇಲ್ಕಂಡ ಲೆಕ್ಕ ಶೀರ್ಷಿಕೆಗೆ ದಿನಾಂಕ:23.06.2025ರಂದು ಸರ್ಕಾರಕ್ಕೆ ಜಮಾ ಮಾಡಲಾಗಿರುವ ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ತೆಗೆದುಕೊಂಡ ಕ್ರಮವನ್ನು ಸ್ಥಿರೀಕರಿಸಿತು. |
| ವಿಷಯ 8 | **IKS ಯೋಜನೆಗಾಗಿ ಕೆನರಾ ಬ್ಯಾಂಕ್‌ನಲ್ಲಿ ZBSA and Holding Account ಖಾತೆ ತೆರೆದಿರುವುದನ್ನು ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.** |
| ಟಿಪ್ಪಣಿ | ಶಾಸ್ತ್ರ ನಿಕಾಯದ ಡೀನ್‌ರಾದ ಪ್ರೊ.ಶಿವಾನಿ ಇವರ ಮನವಿಯಂತೆ IKS ಯೋಜನೆಗಾಗಿ ಕೆನರಾ ಬ್ಯಾಂಕ್‌ನಲ್ಲಿ ZBSA and Holding Account ತೆರೆಯಲಾಗಿದ್ದು, ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಸ್ಥಿರೀಕರಿಸಿತು. ಹಾಗೆಯೇ ಈ ಯೋಜನೆ ಪೂರ್ಣಗೊಂಡ ನಂತರ ಖಾತೆಯನ್ನು ಮುಕ್ತಾಯಗೊಳಿಸುವ ಷರತ್ತಿಗೆ ಒಳಪಡಿಸಿ ಸಮಿತಿಯು ಅನುಮೋದಿಸಿತು. |
| ವಿಷಯ 9 | **ರಾಜ್ಯ ವೇತನ ಶ್ರೇಣಿಯ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಪರೀಕ್ಷಾ ಕಾರ್ಯದ ಸಂಭಾವನೆ ನೀಡುತ್ತಿರುವ ಬಗ್ಗೆ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.** |
| ಟಿಪ್ಪಣಿ | ರಾಜ್ಯ ವೇತನ ಶ್ರೇಣಿಯ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಪರೀಕ್ಷಾ ಕಾರ್ಯದ ಸಂಭಾವನೆಯನ್ನು ಪಾವತಿಸಲಾಗುತ್ತಿದ್ದು, ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ನಿಯಮಾನುಸಾರ ಪಾವತಿಸಲು ಅನುಮೋದಿಸಿತು. |
| ವಿಷಯ 10 | **371ಜೆ ಯೋಜನಾ ಸಹಾಯಕರ ಹುದ್ದೆಯ ಲಿಖಿತ ಪರೀಕ್ಷೆಗೆ ಪ್ರಶ್ನೆ ಪತ್ರಿಕೆ ತಯಾರಿಕೆ ಹಾಗೂ ಪರೀಕ್ಷಾ ಸಂಬಂಧಿ ಇತರ ಭತ್ಯೆಯ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಲ್ಲ ವಿಧವಾದ ನೇಮಕಾತಿಗಳ ಕುರಿತಾದ ಲಿಖಿತ ಪರೀಕ್ಷೆಗಳನ್ನು ಪರೀಕ್ಷಾಂಗವು ನಡೆಸುತ್ತಿದ್ದು, ಪ್ರಸ್ತುತ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬಿ ಗ್ರೂಪ್ ಯೋಜನಾ ಸಹಾಯಕ (ಶೈಕ್ಷಣಿಕ) ಹುದ್ದೆಯ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿದ್ದು, ನಿಯಮಾನುಸಾರ ಅರ್ಜಿ ಸಲ್ಲಿಸಿದ ಅರ್ಹ |

| | |
|---|---|
| | ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಗಳನ್ನು ನಡೆಸಬೇಕಾಗಿದ್ದು, ಪರೀಕ್ಷಾ ಸಂಬಂಧಿ ಭತ್ಯೆಗಳನ್ನು ನಿಗದಿಪಡಿಸಬೇಕಿದೆ. 371ಜೆ ಯೋಜನಾ ಸಹಾಯಕರ ಹುದ್ದೆಯ ಲಿಖಿತ ಪರೀಕ್ಷೆ ನಡೆಸಬೇಕಾಗಿದ್ದು, ಪ್ರಶ್ನೆ ಪತ್ರಿಕೆ ತಯಾರಿಕೆಗಾಗಿ ಸಂಭಾವನೆ ರೂ.3000/- ನಿಗದಿಪಡಿಸುವ ಹಾಗೂ ಈ ಪ್ರಕ್ರಿಯೆಗೆ ಸಂಬಂಧಿಸಿದ ಇತರೆ ಭತ್ಯೆಗಳನ್ನು ನಿಗದಿಪಡಿಸುವ ಸಲುವಾಗಿ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| **ವಿಷಯ 11** | **ಪಿಹೆಚ್‌ಡಿ ಕೋರ್ಸ್ ವರ್ಕ್‌ನ ವಾಕ್/ಮೌಖಿಕ ಪರೀಕ್ಷೆಯನ್ನು ಆನ್-ಲೈನ್ ಮೂಲಕ ನಡೆಸುವ ಬಗೆಗಿನ ವಿಷಯವನ್ನು ಪರಿಷ್ಕರಿಸುವ ಬಗ್ಗೆ.** |
| ಟಿಪ್ಪಣಿ | ಈ ವಿಚಾರವು 49ನೇ ಹಣಕಾಸು ಸಮಿತಿ ಸಭೆ ವಿಷಯ ಸಂಖ್ಯೆ:10ರಲ್ಲಿ ಅನುಮೋದನೆಯಾಗಿದ್ದು, ಇದನ್ನು ತಿದ್ದುಪಡಿ ಮಾಡಿ "ಅನಿವಾರ್ಯ ಸಂಧರ್ಭದಲ್ಲಿ ಅಥವಾ ಅವಶ್ಯವಿದ್ದಲ್ಲಿ" ಎಂದು ಪರಿಷ್ಕರಿಸಲು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು. ಹಾಗೆಯೇ ಅನಿವಾರ್ಯ ಸಂಧರ್ಭದಲ್ಲಿ ಅಥವಾ ಅವಶ್ಯವಿದ್ದಲ್ಲಿ ತೀರ್ಮಾನಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಿತು.** |
| **ವಿಷಯ 12** | **ಹಾಲಿ ಎಸ್ ಬಿ ಐನಲ್ಲಿ ಇಡಲಾಗಿರುವ ಠೇವಣಿಗಳನ್ನು ನಿಯಾಮಾನುಸಾರ ಇ-ಟೆಂಡರ್ ಮೂಲಕ ಠೇವಣಿಗಳನ್ನು ಇಡುವ ಪ್ರಕ್ರಿಯೆ ನಡೆಸುವ ಬಗ್ಗೆ.** |
| ಟಿಪ್ಪಣಿ | ಈಗಾಗಲೇ ಎಸ್ ಬಿ ಐನಲ್ಲಿ ಇಟ್ಟಿರುವ ಠೇವಣಿಗಳನ್ನು ನಿಯಾಮಾನುಸಾರ ಇ-ಟೆಂಡರ್ ಪ್ರಕ್ರಿಯೆ ನಡೆಸಿ ಹೆಚ್ಚಿನ ಬಡ್ಡಿ ನೀಡುವ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡುವ ಬಗ್ಗೆ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಇಟ್ಟಿರುವ ಠೇವಣಿಗಳ ವಾಯ್ದೆ ಮುಗಿದ ನಂತರ ನಿಯಮಾನುಸಾರ ಇ-ಟೆಂಡರ್ ಪ್ರಕ್ರಿಯೆ ನಡೆಸಲು ಅನುಮೋದಿಸಿತು.** |
| **ವಿಷಯ 13** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ತಿಪ್ಪಸಂದ್ರದಲ್ಲಿ ನಿರ್ಮಾಣವಾಗಿರುವ ಕಟ್ಟಡಗಳನ್ನು ಹಸ್ತಾಂತರಿಸುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ತಿಪ್ಪಸಂದ್ರ, ಇಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮೈಸೂರು ಇವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ MOU ಮೂಲಕ ಸುಮಾರು 25ಕೋಟಿ ವೆಚ್ಚದಲ್ಲಿ ಆಡಳಿತ ಮತ್ತು ಶೈಕ್ಷಣಿಕ ಕಟ್ಟಡ ಹಾಗೂ ಬಾಲಕಿಯರ ಮತ್ತು ಬಾಲಕರ ವಸತಿ ನಿಲಯಗಳನ್ನು ನಿರ್ಮಾಣ ಮಾಡಿಕೊಡುವುದರ ಮೂಲಕ ಹಸ್ತಾಂತರಿಸುವ ಬಗ್ಗೆ ಈಗಾಗಲೇ ಎರಡು ವಿಶ್ವವಿದ್ಯಾಲಯಗಳ ಮಾನ್ಯ ಕುಲಪತಿಗಳ ಸಭೆ ನಡೆದಿದ್ದು, ಹಸ್ತಾಂತರದ ಬಗ್ಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಉಭಯ ವಿಶ್ವವಿದ್ಯಾಲಯಗಳು ಮಾಡಿಕೊಳ್ಳಬೇಕಾದ MOU ಕರಡು ಪ್ರತಿಯನ್ನು ನೀಡಿರುತ್ತದೆ. ಇದಕ್ಕೆ ಸಂಬಂಧಿಸಿದ MOU ವಿಷಯಗಳ ಕುರಿತ ಕಾನೂನು ಸಲಹೆಗಳನ್ನು ಪಡೆಯಲು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವತಿಯಿಂದ ಕಾನೂನು ಸಲಹೆಗಾರರಿಗೆ ಸಲ್ಲಿಸಲಾಗಿತ್ತು. ಅದರಂತೆ M/S ಕುಮಾರ್ & ಕುಮಾರ್‌ರವರು ಕಾನೂನು ಅಭಿಪ್ರಾಯವನ್ನು ಸಲ್ಲಿಸಿರುತ್ತಾರೆ. ಮುಂದುವರೆದು, ಸದರಿ ಅಭಿಪ್ರಾಯವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿದ್ದು, ಅಲ್ಲದೇ ನೂತನ ಕ್ಯಾಂಪಸ್ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸಲು ಅವಶ್ಯವಿರುವ ಮೂಲಭೂತ ಸೌಕರ್ಯಗಳಾದ ಚೇರ್/ಟೇಬಲ್‌ಗಳನ್ನು ವಿದ್ಯಾರ್ಥಿಗಳಿಗೆ ಅವಶ್ಯವಿರುವ ಹಾಸಿಗೆ/ಮಂಚಗಳು ಇತ್ಯಾದಿಗಳನ್ನು ಪೂರೈಸಲು ಸರ್ಕಾರಕ್ಕೆ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ. ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದಿಸಿತು.** |
| **ವಿಷಯ 14** | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ ನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಮಿತಿಯ ಅನುಮೋದನೆ ಮಂಡಿಸುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನವಾದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ ನಿಯಮಕ್ಕೆ ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿದೆ. ವೃಂದ ಮತ್ತು ನೇಮಕಾತಿ ನಿಯಮಕ್ಕೆ ಸರ್ಕಾರದ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲು ಸಭೆಯ ಅನುಮತಿ ಕೋರಿದೆ. |
| ನಿರ್ಣಯ | **ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದಿಸಿತು.** |
| **ವಿಷಯ 15** | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಮಿತಿಯ ಅನುಮೋದನೆ ಪಡೆಯುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನವಾದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರಿನಿಯಮವನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿದೆ. ಸರ್ಕಾರದ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರಿನಿಯಮಕ್ಕೆ ಸಭೆಯ ಅನುಮತಿ ಕೋರಿದೆ. |
| ನಿರ್ಣಯ | **ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದಿಸಿತು.** |

| | |
|---|---|
| ವಿಷಯ 16 | ಕಾಗದ ಪತ್ರ ಸಮಿತಿಗೆ ಹಾಜರಾಗಿರುವ ಬಗ್ಗೆ. |
| ಟಿಪ್ಪಣಿ | ದಿನಾಂಕ: 27.06.2025ರಂದು ನಡೆದ ಕಾಗದ ಪತ್ರ ಸಮಿತಿಗೆ ಕುಲಸಚಿವರು, ಹಣಕಾಸು ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಭಾಗವಹಿಸಿದ್ದು, ಸಮಿತಿಯು ಸೂಚಿಸಿದಂತೆ ಲೆಕ್ಕ ಪರಿಶೋಧನಾ ವರದಿಯಲ್ಲಿ 2008-09ನೇ ಸಾಲಿನಲ್ಲಿ 2023-24ನಾ ಸಾಲಿನವರೆಗೆ ಬಾಕಿಯಿರುವ ಆಕ್ಷೇಪಣೆ ಮತ್ತು ವಸೂಲಾತಿಗಳ ಬಗ್ಗೆ ಕ್ರಮಕೈಗೊಳ್ಳುವ ಬಗ್ಗೆ ಚರ್ಚಿಸಿ ತೀರ್ಮಾನಿಸುವ ಸಂಬಂಧ ಮಂಡಿಸಿದೆ. |
| ನಿರ್ಣಯ | **ಆಂತರೀಕ ಸಮಿತಿಯನ್ನು ರಚಿಸಿ ತೀರುವಳಿಯ ಕ್ರಮವನ್ನು ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.** |
| ವಿಷಯ 17 | **ವೃತ್ತಿ ಪ್ರಗತಿ ಯೋಜನೆಯಡಿಯಲ್ಲಿ ಪ್ರಾಧ್ಯಾಪಕ (14) ರಿಂದ ಹಿರಿಯ ಪ್ರಾಧ್ಯಾಪಕ (15) ಪದೋನ್ನತಿ ನೀಡಲು ಸಮಿತಿಯ ವರದಿಯನ್ನು ಅನುಮೋದನೆಗೆ ಮಂಡಿಸಿದೆ.** |
| ಟಿಪ್ಪಣಿ | ದಿನಾಂಕ:18.07.2025ರಂದು ವೃತ್ತಿ ಪ್ರಗತಿ ಯೋಜನೆಯಡಿಯಲ್ಲಿ ಪ್ರಾಧ್ಯಾಪಕ (14) ರಿಂದ ಹಿರಿಯ ಪ್ರಾಧ್ಯಾಪಕ (15) ಪದೋನ್ನತಿ ನೀಡುವ ಬಗ್ಗೆ ಸಮಿತಿಯು ಸಭೆ ಸೇರಿ ಪ್ರಕ್ರಿಯೆಗಳನ್ನು ನಡೆಸಿ ಅರ್ಹತೆ ಹೊಂದಿದ ದಿನಾಂಕದಿಂದ ಜಾರಿಗೆ ಬರುವಂತೆ ವರದಿಯಲ್ಲಿ ಶಿಫಾರಸ್ಸು ಮಾಡಿದೆ. ಈ ವಿಷಯವನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಶ್ರೀಮತಿ ಉಮಾ ಕೆ, ಜಂಟಿ ಕಾರ್ಯದರ್ಶಿ,ಆರ್ಥಿಕ ಇಲಾಖೆ, ಇವರು ಸರ್ಕಾರದ ನೀತಿ ನಿರ್ಣಯದಂತೆ ಅರ್ಹ ಬೋಧಕರಿಗೆ ವೃತ್ತಿ ಪದೋನ್ನತಿಯ(CAS) ಆರ್ಥಿಕ ಸೌಲಭ್ಯವನ್ನು ಅರ್ಹತಾ ದಿನಾಂಕದಿಂದ ಜಾರಿಗೆ ಬರುವಂತೆ ಮಂಜೂರು ಮಾಡದೇ ಈ ಸಂಬಂಧವಾಗಿ ಹೊರಡಿಸುವ ಆದೇಶದ ದಿನಾಂಕದಿಂದ ಮಂಜೂರು ಮಾಡಬೇಕಾಗಿರುತ್ತದೆಂದು ಸಭೆಗೆ ತಿಳಿಸಿದರು.**<br><br>**ಸುದೀರ್ಘ ಚರ್ಚೆಯ ನಂತರ ಸಮಿತಿಯು ಅರ್ಹ ಬೋಧಕರಿಗೆ ವೃತ್ತಿ ಪದೋನ್ನತಿಯ(CAS) ಆರ್ಥಿಕ ಸೌಲಭ್ಯವನ್ನು ಆದೇಶ ಹೊರಡಿಸಿದ ದಿನಾಂಕದಿಂದ ಮಂಜೂರು ಮಾಡಲು ತೀರ್ಮಾನಿಸಿತು.** |
| ವಿಷಯ 18 | ನಕ್ಷತ್ರ ಸೈನ್ಸಸ್ ಪ್ರೈವೇಟ್ ಲಿಮಿಟೆಡ್- ಈ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ. |
| ಟಿಪ್ಪಣಿ | ನಕ್ಷತ್ರ ಸೈನ್ಸಸ್ ಪ್ರೈವೇಟ್ ಲಿಮಿಟೆಡ್, ಕಂಪನಿಗಳ ಕಾಯ್ದೆ 2013ರ ಅಡಿಯಲ್ಲಿ ಸಂಯೋಜಿಸಲ್ಪಟ್ಟ ಒಂದು ಘಟಕ, ಅನನ್ಯ ಕಾರ್ಪೊರೇಟ್ ಗುರುತಿನ ಸಂಖ್ಯೆ U85499KA2023PTC172130 ನೊಂದಿಗೆ, ಸಂಖ್ಯೆ 27, 1ನೇ ಕ್ರಾಸ್, ಗೋಪಾಲಪ್ಪ ಲೇಔಟ್, ಹೆಬ್ಬಾಳ ಕೆಂಪಾಪುರ, ಬೆಂಗಳೂರು 560024 – ಈ ಸಂಸ್ಥೆಯೊಂದಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಒಡಂಬಡಿಕೆಯನ್ನು ಮಾಡಿಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಶೈಕ್ಷಣಿಕ ಉದ್ದೇಶಕ್ಕಾಗಿ ಅನುಮೋದಿಸಿತು. |
| ವಿಷಯ 19 | ಶ್ರೀ ಸುಭಾಷ್ ಬಿ.ಎಂ., ಮುಖ್ಯಶಿಕ್ಷಕರು, ಶ್ರೀ ತೆಗ್ಗಿನಮಠ ಸಂಸ್ಕೃತ ಪಾಠಶಾಲೆ, ಮೇಗಳಪೇಟೆ, ಹರಪನಹಳ್ಳಿ ವಿಜಯನಗರ –ಇವರ ವೇತನ ಪಾವತಿಸುವ ಬಗ್ಗೆ. |
| ಟಿಪ್ಪಣಿ | ಶ್ರೀ ಸುಭಾಷ್ ಬಿ.ಎಂ., ಮುಖ್ಯಶಿಕ್ಷಕರು, ಶ್ರೀ ತೆಗ್ಗಿನಮಠ ಸಂಸ್ಕೃತ ಪಾಠಶಾಲೆ, ಮೇಗಳಪೇಟೆ, ಇವರ ಬಾಕಿ ವೇತನವನ್ನು ಪಾವತಿಸಲು ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶ; ರಿಟ್ ಅರ್ಜಿ ಸಂಖ್ಯೆ: 30137/2016; ದಿನಾಂಕ:26.03.2025ರಂತೆ ಸರ್ಕಾರದ ಆದೇಶ ಸಂಖ್ಯೆ: ಇಡಿ 292 ಡಿಸಿಇ 2025(ಇ); ದಿನಾಂಕ: 16.07.2025ರಂತೆ ಫೆಬ್ರವರಿ 2005 ರಿಂದ ನವೆಂಬರ್ 2011ರ ಅವಧಿಯವರೆಗೆ ಪಾವತಿಸಬೇಕಾಗಿರುವ ವೇತನ ಬಾಕಿ ಮೊತ್ತ 21,10,251-00ಗಳನ್ನು ಪಾವತಿಸುವ ಸಂಬಂಧ ಸಭೆಗೆ ಮಂಡಿಸಿದೆ. |
| ನಿರ್ಣಯ | **ಸರ್ಕಾರದ ಆದೇಶದಂತೆ ಬಾಕಿ ವೇತನ ಪಾವತಿಸಲು ಅನುಮೋದಿಸಿತು.** |
| ವಿಷಯ 20 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬೋಧಕ & ಬೋಧಕೇತರ ಸಿಬ್ಬಂದಿಗಳು ಮತ್ತು ಅವಲಂಬಿತರಿಗೆ ವೈದ್ಯಕೀಯ ಮರುಪಾವತಿ ವೆಚ್ಚವನ್ನು ಭರಿಸಲು ಸರ್ಕಾರದ ನಿಯಮಾವಳಿಗಳನ್ನು ಅಳವಡಿಸಿಕೊಳ್ಳುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬೋಧಕ & ಬೋಧಕೇತರ ಸಿಬ್ಬಂದಿಗಳು ಮತ್ತು ಅವಲಂಬಿತ ಕುಟುಂಬದ ಸದಸ್ಯರ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ)1963ರ ನಿಯಮಗಳನ್ನು ಅಳವಡಿಸಿಕೊಂಡು ಸಿ.ಜಿ.ಹೆಚ್.ಎಸ್ ದರಗಳನ್ವಯ ಪರಿಶೀಲಿಸಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರಿಂದ ಧೃಡೀಕರಿಸಿದ ವೈದ್ಯಕೀಯ ಬಿಲ್ಲುಗಳನ್ನು ಮರುಪಾವತಿ ಮಾಡಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಕೈಬಿಡಲಾಯಿತು.** |
| ವಿಷಯ 21 | ಶ್ರೀ ತಿಮ್ಮಣ್ಣ ಆರ್. ಯೋಜನಾ ಸಹಾಯಕರು ಇವರನ್ನು ಎನ್‌ಪಿಎಸ್ ಒಳಪಡಿಸುವ ಬಗೆಗೆ. |
| ಟಿಪ್ಪಣಿ | ಶ್ರೀ ತಿಮ್ಮಣ್ಣ ಆರ್, ಯೋಜನಾ ಸಹಾಯಕ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರು |

| | |
|---|---|
| | ದಿನಾಂಕ:10.01.2013ರಿಂದ ಯೋಜನಾ ಸಹಾಯಕನಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಈ ಹಿಂದೆ ದಿನಾಂಕ: 03.09.2001 ರಿಂದ ಪ್ರೋಗ್ರೆಸ್ಸಿವ್ ಸಂಸ್ಕೃತ ಪಾಠಶಾಲೆ, ಶಿರಸಿಯಲ್ಲಿ ಅನುದಾನ ಸಹಿತವಾಗಿ ಅನುಮೋದನೆಗೊಂಡು ಸಂಸ್ಕೃತ ಸಹಶಿಕ್ಷಕನಾಗಿ ಸೇವೆ ಸಲ್ಲಿಸಿದ್ದರು. ದಿನಾಂಕ: 21.07.2010 ರಿಂದ ವಾಣೀಭೂಷಣ ಸಂಸ್ಕೃತ ಪಾಠಶಾಲೆ, ನಾಗಮಂಗಲ, ಮಂಡ್ಯ ಜಿಲ್ಲೆ ಈ ಶಾಲೆಗೆ ಸರ್ಕಾರದಿಂದ ವರ್ಗಾವಣೆಗೊಂಡು ಕರ್ತವ್ಯಕ್ಕೆ ಹಾಜರಾಗಿ ದಿನಾಂಕ: 09.10.2013 ರವರೆಗೆ ಸಂಸ್ಕೃತ ಸಹ ಶಿಕ್ಷಕನಾಗಿ ಸೇವೆ ಸಲ್ಲಿಸಿ, ನಂತರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಯೋಜನಾ ಸಹಾಯಕನಾಗಿ ನೇಮಕಾತಿ ಹೊಂದಿರುತ್ತಾರೆ. ಇವರು ಕಳೆದ 12 ವರ್ಷಗಳಿಂದ ಯೋಜನಾ ಸಹಾಯಕರಾಗಿ ಸೇವೆ ಸಲ್ಲಿಸುತ್ತಿದ್ದು, ಒಪಿಎಸ್ ಬಗ್ಗೆ ಸರ್ಕಾರದಿಂದ ನಿರ್ಧಾರವಾಗದ ಕಾರಣದಿಂದ ನೂತನ ಪಿಂಚಣಿ ಯೋಜನೆಗೆ ಒಳಪಡಿಸುವಂತೆ ಕೋರಿ ಪತ್ರ ಸಲ್ಲಿಸಿರುತ್ತಾರೆ. ಯಾವುದೇ ನೌಕರರು ಸರ್ಕಾರದ ಯಾವುದಾದರೊಂದು ಪಿಂಚಣಿ ಯೋಜನೆಯಲ್ಲಿ ಇರಬೇಕಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಎನ್ ಪಿ ಎಸ್ ನ್ನು ಅಳವಡಿಸಿದೆ. ಈ ಹಿನ್ನಲೆಯಲ್ಲಿ ಸದರಿಯವರು ವಿಶ್ವವಿದ್ಯಾಲಯಕ್ಕೆ ನೇಮಕಾತಿ ಆದ ದಿನಾಂಕದಿಂದ ಇವರ NPS ವಂತಿಕೆ **ರೂ.7,00,673.00**ಗಳಾಗಿದ್ದು ವಿಶ್ವವಿದ್ಯಾಲಯದ ವಂತಿಕೆ ರೂ. **7,89,875.00**ಗಳಾಗಿದ್ದು ಈ ಮೊತ್ತವನ್ನು ಪಾವತಿಸಲು ಹಾಗೂ ಸದರಿ ನೌಕರರನ್ನು ನೂತನ ಪಿಂಚಣಿಗೆ ಒಳಪಡಿಸಲು ಹಣಕಾಸು ಸಮಿತಿಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಶ್ರೀ ತಿಮ್ಮಣ್ಣ ಆರ್, ಯೋಜನಾ ಸಹಾಯಕ, ಇವರ ಕೋರಿಕೆಯಂತೆ ವಿಶ್ವವಿದ್ಯಾಲಯಕ್ಕೆ ನೇಮಕಾತಿ ಆದ ದಿನಾಂಕದಿಂದ ಜಾರಿಗೆ ಬರುವಂತೆ ಎನ್‌ಪಿಎಸ್ ಗೆ ಒಳಪಡಿಸಲು ಅನುಮೋದಿಸಿತು.** |
| ವಿಷಯ 22 | **ವಿಶ್ವವಿದ್ಯಾಲಯದ ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಇರುವ 03 ಹುದ್ದೆಗಳಿಗೆ ಪುನರ್ ಪರಿಷ್ಕರಣೆ ಮಾಡುವ ಬಗೆಗೆ.** |
| ಟಿಪ್ಪಣಿ | 2012ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳು ರಚನೆಗೊಂಡಿರುತ್ತದೆ. ಈ ನಿಯಮಾವಳಿಯಲ್ಲಿ ವಿಶ್ವವಿದ್ಯಾಲಯದ ಅಭಿವೃದ್ಧಿ ಹಾಗೂ ಆಡಳಿತದ ದೃಷ್ಟಿಯಿಂದ PS to Vice Chancellor, Computer Programmer& Stenographer ಈ ಹುದ್ದೆಗಳಿಗೆ ನಿಯಮಾವಳಿಯನ್ನು ಪರಿಷ್ಕರಿಸಲು ಕರಡು ತಯಾರಿಸಿದ್ದು, ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದಿಸಿತು. ಮುಂದುವರೆದು Computer Programmer ಹುದ್ದೆಗೆ ಸಂಬಂಧಿಸಿದಂತೆ ನೇರ ನೇಮಕಾತಿಯ ಮೂಲಕ ಎಂದು ತಿದ್ದುಪಡಿ ಮಾಡಿ ಪರಿಷ್ಕರಿಸಲು ಸಭೆಯು ಸೂಚಿಸಿತು.** |
| ವಿಷಯ 23 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ FDP ಕಾರ್ಯಕ್ರಮವನ್ನು ಆಯೋಜಿಸುವ ಕುರಿತು. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆಂತರಿಕ ಗುಣಮಟ್ಟ ಅನುಪಾಲನಾ ಕೋಶದಿಂದ (IQAC) ರಾಷ್ಟ್ರಸ್ತರದಲ್ಲಿ Online ಮೂಲಕ FDP ಯನ್ನು ಆಯೋಜಿಸಲಿದ್ದು, ಈ ಕಾರ್ಯಕ್ರಮದಲ್ಲಿ ದೇಶದ ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳು, ಪ್ರಾಧ್ಯಾಪಕರು ಹಾಗೂ ಸುಪ್ರಸಿದ್ಧ ವಿದ್ವಾಂಸರು ವಿಶೇಷೋಪನ್ಯಾಸವನ್ನು ನೀಡಿ ಮಾರ್ಗದರ್ಶನ ಮಾಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ಅಂದಾಜು ಒಂದು ಲಕ್ಷ ರೂಪಾಯಿಗಳು ಖರ್ಚಾಗಬಹುದಾಗಿದ್ದು ಅನುಮೋದನೆಗಾಗಿ ಸಲ್ಲಿಸಿದೆ. |
| ನಿರ್ಣಯ | **ಅನುಮೋದಿಸಿತು.** |
| ವಿಷಯ 24 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಹಳೆ ವಿದ್ಯಾರ್ಥಿಗಳ ಸಂಘದ ಸಂಘಟನೆಗೆ ವಿಶ್ವವಿದ್ಯಾಲಯದಿಂದ ಸಹಕಾರ ನೀಡುವ ಕುರಿತು |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ 17.09.2021ರಲ್ಲಿ ವಿದ್ಯಾರ್ಥಿಗಳು ಹಳೆ ವಿದ್ಯಾರ್ಥಿ ಸಂಘವನ್ನು (KSUAA) ಸ್ಥಾಪಿಸಿದ್ದು ಸ್ಥಾಪನೆಯ ಸಂದರ್ಭದಲ್ಲಿ 1000.00 ರೂಪಾಯಿಗಳನ್ನು ನೀಡಿ ಕೆಲವು ವಿದ್ಯಾರ್ಥಿಗಳು ಸದಸ್ಯರಾಗಿರುತ್ತಾರೆ. ಆದರೆ ಈ ಸಂಘಕ್ಕೆ ವಿಶ್ವವಿದ್ಯಾಲಯದ ಎಲ್ಲಾ ಹಳೆ ವಿದ್ಯಾರ್ಥಿಗಳಿಂದ ರೂ 500.00 ಸದಸ್ಯತ್ವ ಶುಲ್ಕವನ್ನು ಪಡೆದು ಸದಸ್ಯರನ್ನಾಗಿಸುವ ಕುರಿತು ಸಂಘವು ಯೋಚಿಸುತ್ತಿದ್ದು ಈ ಕಾರ್ಯಕ್ಕೆ ವಿಶ್ವವಿದ್ಯಾಲಯದ ಸಹಕಾರವನ್ನು KSUAA ಯ Joint secretory |

| | |
|---|---|
| | ಆದ ಶ್ರೀವಿದ್ಯಾರವರು ಪತ್ರಮುಖೇನ ಕೋರಿರುತ್ತಾರೆ. ವಿಶ್ವವಿದ್ಯಾಲಯದಿಂದ ನೀಡಬಹುದಾದ ಸಹಕಾರದ ಕುರಿತು ಚರ್ಚಿಸಿ ನಿರ್ಣಯಿಸಲು ಸಲ್ಲಿಸಿದೆ. |
| ನಿರ್ಣಯ | ವಿದ್ಯಾರ್ಥಿಗಳ ಹಂತದಲ್ಲಿಯೇ ಹಾಗೂ ಸ್ವಂತ ಅಭಿಪ್ರಾಯದಂತೆ ಕ್ರಮವಹಿಸಲು ಒಪ್ಪಿತು. |
| ವಿಷಯ 25 | ವಿಶ್ವವಿದ್ಯಾಲಯದ ಹಾಗೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನ್ಯಾಯಾಲಯದ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಾನೂನು ಸಲಹೆಗಾರರಿಗೆ ಪ್ರಕರಣವಾರು ಶುಲ್ಕ ನಿಗದಿಪಡಿಸುವ ಬಗ್ಗೆ. |
| ಟಿಪ್ಪಣಿ | ವಿಶ್ವವಿದ್ಯಾಲಯದ ಹಾಗೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಾನೂನು ಸಲಹೆಗಾರರಿಗೆ ಶುಲ್ಕ ನಿಗದಿಪಡಿಸಲು ಸಮಿತಿಯು ಶಿಫಾರಸ್ಸು ಮಾಡಿರುವ ನಡಾವಳಿಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಸಮಿತಿಯ ಶಿಫಾರಸ್ಸಿನಂತೆ ಪ್ರಕರಣಾವಾರು ಶುಲ್ಕವನ್ನು ನಿಗದಿಪಡಿಸಲು ಸಭೆಯು ಅನುಮೋದಿಸಿತು. ಈಗ ಹಾಲಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಕ್ಕೆ ಮಾಸಿಕ ಸಂಭಾವನೆ ಮೇಲೆ ನೇಮಕ ಮಾಡಿರುವ ವಕೀಲರ ಸೇವೆಯನ್ನು ದಿನಾಂಕ:31.07.2025ಕ್ಕೆ ಮುಕ್ತಾಯಗೊಳಿಸಲು ಒಪ್ಪಿತು. ಮುಂದುವರೆದು, ಹಾಲಿ ವಿಶ್ವವಿದ್ಯಾಲಯದಿಂದ ನೇಮಕ ಮಾಡಲಾಗಿರುವ ಮೆ. ಕುಮಾರ್ ಅಂಡ್ ಕುಮಾರ್ ಅಸೋಸಿಯೇಟ್ಸ್ ಇವರಿಗೆ ಪ್ರಕರಣಾವಾರು ಶುಲ್ಕವನ್ನು ನಿಗದಿಪಡಿಸಿ ಅವರಿಂದ ಸೇವೆ ಪಡೆದುಕೊಳ್ಳಲು ಒಪ್ಪಿತು. |
| ವಿಷಯ 26 | ವಿದೇಶಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಶುಲ್ಕ ನಿಗದಿಪಡಿಸುವ ಬಗ್ಗೆ. |
| ಟಿಪ್ಪಣಿ | ವಿಶ್ವವಿದ್ಯಾಲಯದ ಪ್ರವೇಶಾತಿಗಾಗಿ ವಿದೇಶಿ ವಿದ್ಯಾರ್ಥಿಗಳಿಗೆ ಶುಲ್ಕ ನಿಗದಿಪಡಿಸಲು ಸಮಿತಿಯು ಸಲ್ಲಿಸಿರುವ ನಡಾವಳಿಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ 27 | ಕರ್ನಾಟಕದಾದ್ಯಂತ ಏಕೋಪಾಧ್ಯಯ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ವಯೋನಿವೃತ್ತಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವ ಬಗ್ಗೆ. |
| ಟಿಪ್ಪಣಿ | ಕರ್ನಾಟಕದಾದ್ಯಂತ ಏಕೋಪಾಧ್ಯಯ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ದಿನಾಂಕ:01.01.2021 ರಿಂದ ಇಲ್ಲಿಯವರೆಗೆ ವಯೋನಿವೃತ್ತಿಯಿಂದ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸಂಬಂಧಿಸಿದ ಆಡಳಿತ ಮಂಡಳಿಗಳಿಂದ ಪ್ರಸ್ತಾವನೆಗಳು ಬಂದಿದ್ದು, ಸರ್ಕಾರದಿಂದ ಕಟ್-ಆಫ್ ದಿನಾಂಕವನ್ನು ನಿಗಧಿಪಡಿಸಿರುವುದರಿಂದ ಅನುಮತಿ ನೀಡಲು ಸಾಧ್ಯವಾಗಿರುವುದಿಲ್ಲ. ಅನುಮತಿ ನೀಡದಿದ್ದರೆ ಪಾಠಶಾಲೆಗಳು ಮುಚ್ಚುವಂತಹ ಸಂಧರ್ಭ ಉದ್ಭವವಾಗುತ್ತದೆ, ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಯಾವುದೇ ಆರ್ಥಿಕ ಹೊರೆಯಾಗದಿರುವುದರಿಂದ ಈ ಬಗ್ಗೆ ತೀರ್ಮಾನ ಕೈಗೊಳ್ಳಲು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಏಕೋಪಾಧ್ಯಯ ಶಾಲೆಗೆ ಸಂಬಂಧಿಸಿದಂತೆ ಖಾಲಿಯಿರುವ ಹುದ್ದೆಗಳು, ಪ್ರಸ್ತುತ ಇರುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಉದ್ದೇಶ ಮತ್ತು ತರಗತಿ ಇತ್ಯಾದಿಗಳ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಸಂಬಂಧಪಟ್ಟ ಆಡಳಿತ ಮಂಡಳಿಯಿಂದ ಪಡೆದುಕೊಂಡು ಸರ್ಕಾರಕ್ಕೆ ವಿಶೇಷ ಪ್ರಕರಣವೆಂದು ಪರಿಗಣಿಸಿ ಹುದ್ದೆಗಳನ್ನು ತುಂಬುವಲ್ಲಿ ಪ್ರಸ್ತಾವನೆ ಸಲ್ಲಿಸಲು ಸಭೆಯು ಅನುಮೋದಿಸಿತು. |
| ವಿಷಯ 28 | **SCSP/TSP Surplus** ಠೇವಣಿಯಿಂದ ಬಂದ ಬಡ್ಡಿಯನ್ನು ಎಸ್‌ಸಿ/ಎಸ್ಟಿ ವಿದ್ಯಾರ್ಥಿಗಳಿಗೆ ಉಪಯೋಗಿಸುವ ಬಗ್ಗೆ. |
| ಟಿಪ್ಪಣಿ | **SCSP/TSP Surplus** ಠೇವಣಿಯಿಂದ ಬಂದ ಬಡ್ಡಿಯನ್ನು **SC/ST** ವಿದ್ಯಾರ್ಥಿಗಳಿಗೆ ಉಪಯೋಗಿಸಲು 2025-26ನೇ ಸಾಲಿನ ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಕ್ರಿಯಾ ಯೋಜನೆಯನ್ವಯ ಅನುಷ್ಠಾನಗೊಳಿಸಲು ಅನುಮೋದಿಸಿತು. |
| ವಿಷಯ 29 | **CMR** ವಿಶ್ವವಿದ್ಯಾಲಯ ಬೆಂಗಳೂರು ಇದರೊಂದಿಗೆ **MOU** ಮಾಡಿಕೊಳ್ಳುವ ಬಗ್ಗೆ. |
| ಟಿಪ್ಪಣಿ | **CMR** ವಿಶ್ವವಿದ್ಯಾಲಯ ಬೆಂಗಳೂರು ಇದರೊಂದಿಗೆ **MOU** ಮಾಡಿಕೊಳ್ಳುವ ಬಗ್ಗೆ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಶೈಕ್ಷಣಿಕ ಉದ್ದೇಶಕ್ಕಾಗಿ ಅನುಮೋದಿಸಿತು. |
| | ಅಧ್ಯಕ್ಷರ ಅಪ್ಪಣೆ ಮೇರೆಗೆ ಸಂಬಂಧಿಸಿದ ಇತರೆ ವಿಷಯಗಳು |
| ವಿಷಯ 01 | ಸಂಜೆ ಕಾಲೇಜಿನ ಪರಿನಿಯಮವನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | ಸಂಜೆ ಕಾಲೇಜಿನ ಪರಿನಿಯಮಕ್ಕೆ ಸಂಬಂಧಿಸಿದಂತೆ ಸಮಿತಿಯು ಸಲ್ಲಿಸಲಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವ ಮುನ್ನ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಅನುಮೋದಿಸಿತು. |
| ವಿಷಯ 02 | ಜಿ ಎಸ್ ಟಿ ಪಾವತಿಸುವ ಬಗ್ಗೆ. |

| | |
|---|---|
| ಟಿಪ್ಪಣಿ | 2017–18ನೇ ಸಾಲಿನಿಂದ 2022–23 ಸಾಲಿನವರೆಗೆ ಮಾನ್ಯತಾ ಶುಲ್ಕ ಹಾಗೂ ಇನ್ನಿತರ ಶುಲ್ಕಗಳಿಗೆ ವಾಣಿಜ್ಯ ತೆರಿಗೆಯನ್ನು ಪಾವತಿಸದೆ ಇರುವ ಬಗ್ಗೆ ಸಂಬಂಧಿಸಿದ ಇಲಾಖೆಯಿಂದ ಸೂಚನಾ ಪತ್ರಗಳು ಬಂದಿದ್ದು, ಇದರ ಬಗ್ಗೆ ಕ್ರಮವಾಗದ ಕಾರಣ ಜಿ ಎಸ್ ಟಿ ಮೊತ್ತ, ದಂಡ ಮತ್ತು ಬಡ್ಡಿ ಸೇರಿ ರೂ.31,51,630/–ನ್ನು ಪಾವತಿಸುವಂತೆ ನಿರ್ದೇಶಿಸಲಾಗಿದೆ. ಈ ಸಂಬಂಧ ವಿಶ್ವವಿದ್ಯಾಲಯದ ಅಧಿಕಾರಿಗಳು ಹಾಗೂ ಅಂಗೀಕೃತ ಲೆಕ್ಕ ಪರಿಶೋಧಕರೊಡನೆ ಸಂಬಂಧಪಟ್ಟ ಇಲಾಖೆಯ ಆಯುಕ್ತರನ್ನು ಭೇಟಿ ಮಾಡಿ ಚರ್ಚಿಸಲಾಗಿ, ಅಪೀಲು ಹೋಗುವ ದೃಷ್ಠಿಯಿಂದ ತಕ್ಷಣ ಕಟ್ಟಬೇಕಾದ ಜಿ ಎಸ್ ಟಿ ಮೊತ್ತ ರೂ. 11,99,032/–ನಲ್ಲಿ ಶೇಕಡಾ 10ರಂತೆ ರೂ. 1,19,903/–ನ್ನು ಠೇವಣಿ ಮಾಡಲು ನಿರ್ದೇಶಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| **ವಿಷಯ 03** | **Integrated Teacher's Education Program (ITEP) 04 ವರ್ಷದ ಯುಜಿಸಿ ಅಂಗೀಕೃತ ಸಂಯುಕ್ತ ವಿಷಯ ಪದವಿ ಕಾರ್ಯಕ್ರಮವನ್ನು ಪ್ರಾರಂಭಿಸುವ ಬಗ್ಗೆ.** |
| ಟಿಪ್ಪಣಿ | Integrated Teacher's Education Program (ITEP) 04 ವರ್ಷದ ಯುಜಿಸಿ ಅಂಗೀಕೃತ ಸಂಯುಕ್ತ ವಿಷಯ ಪದವಿ ಕಾರ್ಯಕ್ರಮವಾಗಿದ್ದು, ಪದವಿ ಪೂರ್ವ ಹಂತದಲ್ಲಿಯೇ ಶಿಕ್ಷಕರಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ. 2026–27ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಅಗತ್ಯ ಮೂಲಭೂತ ಸೌಕರ್ಯ, ಅಧ್ಯಾಪಕರ ನೇಮಕಾತಿ, ಗ್ರಂಥಾಲಯ ಮತ್ತು ಡಿಜಿಟಲ್ ಸೌಲಭ್ಯ, ಆಡಳಿತಾತ್ಮಕ ವ್ಯವಸ್ಥೆಗಾಗಿ ಅಂದಾಜು ರೂ.80 ಲಕ್ಷಗಳ ಬಜೆಟ್ ಪ್ರತಿ ವರ್ಷ ಅವಶ್ಯಕತೆಯಿದ್ದು, ಇದರಲ್ಲಿ ರೂ.55 ಲಕ್ಷವನ್ನು ಸರ್ಕಾರದಿಂದ ಕೋರಬಹುದಾಗಿದ್ದು, ಉಳಿದಂತೆ ವಿಶ್ವವಿದ್ಯಾಲಯದ ಆಂತರೀಕ ಸಂಪನ್ಮೂಲದಿಂದ ಭರಿಸುವ ಉದ್ದೇಶ ಹೊಂದಿದೆ. ಈ ಹಿನ್ನೆಲೆಯಲ್ಲಿ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಜಮಾ–ಖರ್ಚು ಹಾಗೂ ಪ್ರವೇಶಾತಿ ಶುಲ್ಕದೊಂದಿಗೆ ವಿವರವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದಿಸಿತು. |
| **ವಿಷಯ 04** | **ಕೇಂದ್ರ ಸರ್ಕಾರದ ಎನ್ ಸಿ ಟಿ ಇ ಯಿಂದ ಅನುಮೋದನೆಗೊಂಡ ಬಿ.ಎಡ್ ಕೋರ್ಸ್‌ನ್ನು ಪ್ರಾರಂಭಿಸುವ ಬಗ್ಗೆ.** |
| ಟಿಪ್ಪಣಿ | ಬಿ.ಎಡ್ ಕೋರ್ಸ್ ಸಂಸ್ಕೃತ ಅಧ್ಯಾಪಕರಿಗೆ ತುಂಬಾ ಉಪಯುಕ್ತವಾಗಿದ್ದು, ಈ ಕೋರ್ಸ್‌ನ್ನು ಪ್ರಾರಂಭಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಸಭೆಯು ಅನುಮೋದಿಸಿತು. |

ಮೇಲ್ಕಂಡ ವಿಷಯಗಳನ್ನು ಹೊರತು ಪಡಿಸಿ ಇತರೆ ವಿಷಯಗಳು ಚರ್ಚೆಗೆ ಬಾರದ ಕಾರಣ ಮಾನ್ಯ ಅಧ್ಯಕ್ಷರ ಅಪ್ಪಣೆಯೊಂದಿಗೆ ಹಾಜರಿದ್ದ ಎಲ್ಲಾ ಸದಸ್ಯರಗಳಿಗೂ ವಂದಿಸಿ ಸಭೆಯು ಮುಕ್ತಾಯಗೊಂಡಿತು.

(ಡಾ. ಕುಮಾರ ಎಸ್) 28/7/25
ಹಣಕಾಸು ಅಧಿಕಾರಿಗಳು
ಸದಸ್ಯ ಕಾರ್ಯದರ್ಶಿ

(ಡಾ॥ ಎಸ್. ಅಹಲ್ಯ) 28/7/25
ಕುಲಪತಿಗಳು
ಅಧ್ಯಕ್ಷರು

ದಿನಾಂಕ:28.07.2025